ಕೃಷಿ ವಿಶ್ವವಿದ್ಯಾಲಯ, ಧಾರವಾಡ

# ವಾರ್ತಾ ಪತ್ರಿಕೆ

ಕೃಷಿ ವಿಜ್ಞಾನ ಕೇಂದ್ರ, ಹಾವೇರಿ, ಹನುಮನಮಟ್ಟಿ

Website: www. kvkhaveri.org

Email:kvk_haveri@rediffmail.com

ಜನೇವರಿ – ಜೂನ್, 2013 ಸಂಪುಟ – 10 ಸಂಚಿಕೆ – 1 & 2

## ಕೃಷಿ ವಿಜ್ಞಾನ ಕೇಂದ್ರದ ಕಾರ್ಯ ಚಟುವಟಿಕೆಗಳು

### ವೈಜ್ಞಾನಿಕ ಸಲಹಾ ಸಮಿತಿ ಸಭೆ





ಕೇಂದ್ರದಲ್ಲಿ ದಿನಾಂಕ 02.03.2013 ರಂದು ಜರುಗಿದ 36ನೇ ವೈಜ್ಞಾನಿಕ ಸಲಹಾ ಸಮಿತಿ ಸಭೆಯಲ್ಲಿ ಅಧ್ಯಕ್ಷತೆಯನ್ನು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ಡಾ. ಆರ್.ಆರ್. ಹಂಚಿನಾಳ್‌ರವರು ವಹಿಸಿದ್ದರು. ಶ್ರೀ ರಾಮಮೂರ್ತಿ, ವಲಯ ಯೋಜನಾ ನಿರ್ದೇಶನಾಲಯ, ಬೆಂಗಳೂರು, ಡಾ. ಕೃಷ್ಣಾ ನಾಯಕ್, ವಿಸ್ತರಣಾ ನಿರ್ದೇಶಕರು, ಡಾ. ಎಸ್.ಟಿ. ನಾಯಕ್, ಸಹ ವಿಸ್ತರಣಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಹಾಗೂ ಜಿಲ್ಲೆಯ ಕೃಷಿ ಮತ್ತು ಕೃಷಿಗೆ ಸಂಬಂಧಿತ ಇಲಾಖೆಗಳ ಅಧಿಕಾರಿಗಳು, ವೈಜ್ಞಾನಿಕ ಸಲಹಾ ಸಮಿತಿಯ ಸದಸ್ಯರುಗಳು ಹಾಗೂ ರೈತ ಪ್ರತಿನಿಧಿಗಳು ಭಾಗವಹಿಸಿ ಕೇಂದ್ರದ ಅಭಿವೃದ್ಧಿಯ ಬಗ್ಗೆ ಸೂಕ್ತ ಸಲಹೆ ಮತ್ತು ಸೂಚನೆಗಳನ್ನು ನೀಡಿದರು.

### ಶೇಂಗಾ ಬೆಳೆಯ ಕ್ಷೇತ್ರೋತ್ಸವ







ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ ವತಿಯಿಂದ ದಿನಾಂಕ: 10.04.2013 ರಂದು ರಾಣೇಬೆನ್ನೂರು ತಾಲ್ಲೂಕು ಮಾಗೋಡು ಗ್ರಾಮದ ಶ್ರೀ ರಾಮಪ್ಪ ಹಾಲಬಾವಿಯವರ ತಾಕಿನಲ್ಲಿ ಜಿ.ಪಿ.ಬಿ.ಡಿ–4 ಹಾಗೂ ಜಿ.ಪಿ.ಬಿ.ಡಿ–5 ಶೇಂಗಾ ತಳಿಯ ಕ್ಷೇತ್ರೋತ್ಸವವನ್ನು ಏರ್ಪಡಿಸಲಾಗಿತ್ತು. ಧಾರವಾಡ ಕೃಷಿ ವಿಶ್ವವಿದ್ಯಾಲಯದಿಂದ ಬಿಡುಗಡೆ ಮಾಡಿರುವ ಶೇಂಗಾ ತಳಿಗಳಾದ ಜಿ.ಪಿ.ಬಿ.ಡಿ–4 ಹಾಗೂ ಜಿ.ಪಿ.ಬಿ.ಡಿ–5 ಶೇಂಗಾ ಬೆಳೆಗೆ ಮಾರಕವಾಗಿರುವ ಎಲೆಚುಕ್ಕೆ ಹಾಗೂ ತುಕ್ಕು ರೋಗಕ್ಕೆ ನಿರೋಧಕತೆ ಹೊಂದಿವೆ. ಈ ತಳಿಗಳು ಮುಂಗಾರು ಹಾಗೂ ಬೇಸಿಗೆಯಲ್ಲಿ ಅನುಕ್ರಮವಾಗಿ ಮಳೆಯಾಶ್ರಿತ ಹಾಗೂ ನೀರಾವರಿ ಪ್ರದೇಶದಲ್ಲಿ ಬೆಳೆದಾಗ 105 ರಿಂದ 110 ದಿವಸಗಳಲ್ಲಿ ಕಟಾವಿಗೆ ಬರಲಿದ್ದು ಪ್ರತಿ ಹೆಕ್ಟೇರಿಗೆ 25 ರಿಂದ 30 ಕ್ವಿಂಟಲ್ ಇಳುವರಿ ನೀಡುವುದರೊಂದಿಗೆ ಉತ್ತಮ ಗುಣಮಟ್ಟದ ಮೇವು ಸಹ ದೊರೆಯುತ್ತದೆ. ಜಿ.ಪಿ.ಬಿ.ಡಿ–4 ಇತರೆ ತಳಿಗಳಷ್ಟೇ ಎಣ್ಣೆಯ ಅಂಶ ಹೊಂದಿದ್ದು, ಜಿ.ಪಿ.ಬಿ.ಡಿ–5 ರಲ್ಲಿ ಎಣ್ಣೆಯ ಅಂಶ ಕಡಿಮೆಯಿದೆ. ಹೀಗಾಗಿ ಜಿ.ಪಿ.ಬಿ.ಡಿ–5 ಆಹಾರ ಪದಾರ್ಥವಾಗಿ ಬಳಸಲು ಹೆಚ್ಚು ಸೂಕ್ತ. ರೈತರು ಇದರ ಲಾಭ ಪಡೆಯಬೇಕೆಂದು ಕೃಷಿ ವಿಜ್ಞಾನ ಕೇಂದ್ರ ತಿಳಿಸಬಯಸುತ್ತದೆ.





## ಸಮಗ್ರ ಕೃಷಿ ಪದ್ಧತಿ ಯೋಜನೆಯಡಿ ತರಬೇತಿ ಹಾಗೂ ಪರಿಕರಗಳ ವಿತರಣೆ





ಸಮಗ್ರ ಕೃಷಿ ಪದ್ಧತಿಯ ಅಳವಡಿಕೆಯಿಂದ ಉತ್ತರ ಕರ್ನಾಟಕದ ಕೃಷಿ ವಲಯಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಕುಟುಂಬಗಳ ಸಬಲೀಕರಣ ಯೋಜನೆಯಡಿ ಶಿಗ್ಗಾಂವ್ ತಾಲ್ಲೂಕಿನ ನೀರಲಕಟ್ಟಿ ಹಾಗೂ ಶಿಡ್ಲಾಪುರ ಗ್ರಾಮಗಳ ಆಯ್ದ ರೈತರುಗಳಿಗೆ ಸಮಗ್ರ ಕೃಷಿ ಪದ್ಧತಿಗಳ ಕುರಿತು ತರಬೇತಿ ಹಾಗೂ ಅಗತ್ಯ ಪರಿಕರಗಳ ವಿತರಣೆ ಮಾಡಲಾಯಿತು. ಲಭ್ಯವಿರುವ ಸಂಪನ್ಮೂಲಗಳನ್ನು ಉಪಯೋಗಿಸಿ ಹೆಚ್ಚಿನ ಆದಾಯ ಗಳಿಸುವುದು ಹಾಗೂ ಕೃಷಿಯಲ್ಲಿ ಸುಸ್ಥಿರತೆ ಹೊಂದುವಂತೆ ಫಲಾನುಭವಿಗಳಿಗೆ ಅಗತ್ಯ ತಾಂತ್ರಿಕ ಮಾಹಿತಿ ಮತ್ತು ಪರಿಕರಗಳನ್ನು ನೀಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

## ಹಿಂಗಾರು ಶೇಂಗಾ ಬೆಳೆಯಲ್ಲಿ ರೈತ ಕ್ಷೇತ್ರ ಪಾಠಶಾಲೆ









ಹಿರೇಕೆರೂರು ತಾಲ್ಲೂಕಿನ ಕುಡುಪಲಿ ಗ್ರಾಮದಲ್ಲಿ ಶೇಂಗಾ ಬೆಳೆಯ ಬೀಜೋತ್ಪಾದನೆ ಹಾಗೂ ಸಮಗ್ರ ಬೆಳೆ ನಿರ್ವಹಣೆ ಕುರಿತ ರೈತ ಕ್ಷೇತ್ರ ಪಾಠಶಾಲೆ (**FFS**) ಕಾರ್ಯಕ್ರಮವನ್ನು ಕೈಗೊಳ್ಳಲಾಯಿತು. ಈ ಯೋಜನೆಯಡಿ ಗ್ರಾಮದ ರೈತರಾದ ಶ್ರೀ ನಿಂಗಪ್ಪ ಬಸಪ್ಪ ಮರಿಬಸಪ್ಪನವರ್ ರವರ ಒಂದು ಎಕರೆ ಹೊಲವನ್ನು ಆಯ್ಕೆ ಮಾಡಿ ಅವರಿಗೆ ಬೇಕಾಗುವ ಬೀಜ (ಜಿ.ಪಿ.ಬಿ.ಡಿ–5) ಮತ್ತು ಬೀಜೋಪಚಾರ ಸಾಮಗ್ರಿಗಳನ್ನು ಕೃಷಿ ವಿಜ್ಞಾನ ಕೇಂದ್ರದಿಂದ ಒದಗಿಸಿ ಬೀಜೋಪಚಾರದಿಂದ ಕಟಾವಿನ ಹಂತದವರೆಗೆ ಬರುವ ನೂತನ ಕೃಷಿ ತಾಂತ್ರಿಕತೆಗಳನ್ನು ಅಳವಡಿಸಲಾಗಿದೆ. ಬೆಳೆಯ ವಿವಿಧ ಹಂತಗಳಲ್ಲಿ ವಿಜ್ಞಾನಿಗಳು ಹೊಲಕ್ಕೆ ಭೇಟಿ ನೀಡಿ ಸೂಕ್ತ ಸಲಹೆಗಳನ್ನು ನೀಡುವುದರ ಜೊತೆಗೆ ಗ್ರಾಮದ ಇತರೆ ರೈತರೂ ಕೂಡ ಈ ತಾಂತ್ರಿಕತೆಯನ್ನು ಅಳವಡಿಸಿಕೊಳ್ಳುವ ಉದ್ದೇಶದಿಂದ ಆಸಕ್ತ ರೈತರನ್ನು ಸೇರಿಸಿ ನೂತನ ಬೇಸಾಯ ಕ್ರಮಗಳು, ಸಮಗ್ರ ಪೋಷಕಾಂಶ ನಿರ್ವಹಣೆ, ಲಘು ಪೋಷಕಾಂಶಗಳ ಮಹತ್ವ, ಸಮಗ್ರ ಕೀಡೆ ನಿರ್ವಹಣೆ ಮತ್ತು ಶ್ರಮ ಕಡಿಮೆಗೊಳಿಸುವ ತಾಂತ್ರಿಕತೆಗಳ ಕುರಿತು ಗುಂಪು ಚರ್ಚೆ ಹಾಗೂ ತರಬೇತಿ ಕಾರ್ಯಕ್ರಮಗಳ ಮುಖಾಂತರ ಮಾಹಿತಿಯನ್ನು ನೀಡಲಾಗಿದೆ. ಶೇಂಗಾ ಬೆಳೆಯಲ್ಲಿ ನವೀನ ತಾಂತ್ರಿಕತೆಯನ್ನು ಅಳವಡಿಸಿ ಹೆಚ್ಚಿನ ಉತ್ಪನ್ನ ಮತ್ತು ಆದಾಯವನ್ನು ಪಡೆಯುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ.

## ವೃತ್ತಿಪರ ತರಬೇತಿ









ರೈತ ಮಹಿಳೆಯರು ಹಾಗೂ ಗ್ರಾಮೀಣ ಯುವತಿಯರ ವೃತ್ತಿ ಕೌಶಲ್ಯತೆಗಳನ್ನು ಅಭಿವೃದ್ಧಿಪಡಿಸಲು ದಿನಾಂಕ: 21.03.2013 ರಿಂದ 28.03.2013 ರ ವರೆಗೆ 8 ದಿನಗಳ ವೃತ್ತಿಪರ ತರಬೇತಿಯನ್ನು ಉಡುಪು ತಯಾರಿಕೆಯ ನೂತನ ತಂತ್ರಜ್ಞಾನಗಳು ಎಂಬ ವಿಷಯದ ಮೇಲೆ ರಾಣೇಬೆನ್ನೂರು ತಾಲ್ಲೂಕಿನ ರಾಹುತನಕಟ್ಟೆ ಗ್ರಾಮದಲ್ಲಿ ಆಯೋಜಿಸಲಾಗಿತ್ತು. ಗ್ರಾಮದ ಸುಮಾರು 19 ಮಹಿಳೆಯರು ಈ ತರಬೇತಿಯ ಪ್ರಯೋಜನ ಪಡೆದು ತಮ್ಮ ವೃತ್ತಿ ಕೌಶಲ್ಯತೆಗಳನ್ನು ಅಭಿವೃದ್ಧಿ ಪಡಿಸಿಕೊಂಡರು.

## ಗುಂಪು ಚರ್ಚೆ







2013–14 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಹಮ್ಮಿಕೊಳ್ಳಲಾಗುವ ಕ್ಷೇತ್ರ ಪರಿಶೀಲನೆ ಹಾಗು ಪ್ರಥಮ ಹಂತದ ಪ್ರಾತ್ಯಕ್ಷಿಕೆಗಾಗಿ ಜಿಲ್ಲೆಯ ಆಯ್ದ ಗ್ರಾಮಗಳಲ್ಲಿ ತರಬೇತಿ ಹಾಗು ಗುಂಪು ಚರ್ಚೆಯ ಮುಖಾಂತರ ರೈತ ಫಲಾನುಭವಿಗಳನ್ನು ಆರಿಸಲಾಯಿತು.

## ಆತ್ಮ ಯೋಜನೆಯಡಿಯಲ್ಲಿ ಕೃಷಿ ವಿಜ್ಞಾನ ಕೇಂದ್ರದ ಸಹಭಾಗಿತ್ವ










ಹಾವೇರಿ ಜಿಲ್ಲೆಯ ಆತ್ಮ ಯೋಜನೆಯಡಿ ನಡೆದ ವಿವಿಧ ಕಾರ್ಯಕ್ರಮಗಳಲ್ಲಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಭಾಗವಹಿಸಿ ರೈತರಿಗೆ/ರೈತ ಮಹಿಳೆಯರಿಗೆ ಮಾಹಿತಿ/ತರಬೇತಿ ನೀಡಿದರು.

## ಭೂ ಚೇತನ ಯೋಜನೆಯಲ್ಲಿ ಕೃಷಿ ವಿಜ್ಞಾನ ಕೇಂದ್ರದ ಸಹಭಾಗಿತ್ವ






ಹಾವೇರಿ ಜಿಲ್ಲೆಯ ಭೂ ಚೇತನ ಕಾರ್ಯಕ್ರಮದಡಿ ನಡೆದ ರೈತ ಅನುವುಗಾರರ ತರಬೇತಿ ಕಾರ್ಯಕ್ರಮಗಳಲ್ಲಿ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಕಾರ್ಯಾಗಾರಗಳಲ್ಲಿ ಕೇಂದ್ರದ ವಿಜ್ಞಾನಿಗಳು ಪಾಲ್ಗೊಂಡು ತರಬೇತಿ/ಮಾಹಿತಿಗಳನ್ನು ನೀಡಿರುತ್ತಾರೆ.

## ಕೃಷಿ ಉತ್ಸವಗಳಲ್ಲಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳ ಭಾಗವಹಿಸುವಿಕೆ




ಹಾವೇರಿ ಜಿಲ್ಲೆಯಲ್ಲಿ ನಡೆದ ಹೋಬಳಿ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಕೃಷಿ ಉತ್ಸವಗಳಲ್ಲಿ ಕೇಂದ್ರದ ವಿಜ್ಞಾನಿಗಳು ಭಾಗವಹಿಸಿ ರೈತರಿಗೆ ಸಮಗ್ರ ಕೃಷಿ ಪದ್ಧತಿ, ಸಮಗ್ರ ಬೆಳೆ ನಿರ್ವಹಣೆ, ಮತ್ತು ಬೀಜೋತ್ಪಾದನೆಗೆ ಸಂಬಂಧಿಸಿದಂತೆ ನೂತನ ಕೃಷಿ ಮತ್ತು ಕೃಷಿಯೇತರ ವಿಷಯಗಳ ಕುರಿತು ಮಾಹಿತಿ ನೀಡಿದರು. ಜಾನುವಾರುಗಳ ಪ್ರದರ್ಶನಗಲ್ಲಿ ನಿರ್ಣಾಯಕರಾಗಿ ಭಾಗವಹಿಸಲಾಗಿತ್ತು.

## ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ರಾಣೇಬೆನ್ನೂರಿನ ದೊಡ್ಡಪೇಟೆಯಲ್ಲಿ ಮಹಿಳೆಯರಿಗಾಗಿ ಸ್ವಾವಲಂಬನೆ ಹಾಗೂ ಸ್ವ ಉದ್ಯೋಗದ ಕುರಿತು ದಿನಾಂಕ: 08.03.2013ರಂದು ಅರಿವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಮಹಿಳಾ ದಿನಾಚರಣೆಯ ಮಹತ್ವದ ಬಗ್ಗೆ ಮಾಹಿತಿ ನೀಡುವುದರೊಂದಿಗೆ ವಿವಿಧ ಸ್ಪರ್ದೆಗಳನ್ನು ಆಯೋಜಿಸಲಾಗಿದ್ದು ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು




## 2013–14ನೇ ಸಾಲಿಗೆ ಮಂಜೂರಾದ ಕ್ಷೇತ್ರ ಪರಿಶೀಲನೆಗಳು ಹಾಗೂ ಮುಂಚೂಣಿ ಪ್ರಾತ್ಯಕ್ಷಿಕೆಗಳು

### ಕ್ಷೇತ್ರ ಪರಿಶೀಲನೆಗಳು

| ಕ್ರ.ಸಂ. | ಕ್ಷೇತ್ರ ಮರುಪರಿಶೀಲನೆಗಳು | ಸಂಖ್ಯೆ |
|---|---|---|
| 1. | ಶೇಂಗಾ ಬೆಳೆಯಲ್ಲಿ ಕದರಿ–6 / ಜಿ–2–52 ತಳಿಯ ಕ್ಷೇತ್ರ ಪರಿಶೀಲನೆ | 05 |
| 2. | ಹುರುಳಿಕಾಯಿಯ ನೂತನ ತಳಿ, ಅರ್ಕಾ ಶರತ್ ಪರಿಚಯಿಸುವಿಕೆ | 10 |
| 3. | ಈರುಳ್ಳಿ ತಳಿಗಳ ಕ್ಷೇತ್ರ ಪರಿಶೀಲನೆ | 03 |
| 4. | ವಿವಿಧ ಮಣ್ಣಿನ ಆರೋಗ್ಯ ಸ್ಥಿತಿಗಳ ಆಧಾರದ ಮೇಲೆ ಗೋವಿನಜೋಳ ಉತ್ಪಾದನಾ ಮಟ್ಟವನ್ನು ಪರೀಕ್ಷಿಸುವುದು | 08 |

### ಮುಂಚೂಣಿ ಪ್ರಾತ್ಯಕ್ಷಿಕೆಗಳು

| ಕ್ರ.ಸಂ. | ಮುಂಚೂಣಿ ಪ್ರಾತ್ಯಕ್ಷಿಕೆಗಳು | ಸಂಖ್ಯೆ |
|---|---|---|
| 1. | ಗೋವಿನ ಜೋಳದ ದ್ವಿ ಉಪಯೋಗಿ ಹೈಬ್ರಿಡ್ ತಳಿ ಹೇಮಾ (ಎನ್.ಎ.ಹೆಚ್.□1137) ದ ಪ್ರಾತ್ಯಕ್ಷಿಕೆ | 15 |
| 2. | ಏರೋಬಿಕ್ ಭತ್ತದ ಬೇಸಾಯ | 05 |
| 3. | ಸಾವೆಯ ಸುಕ್ಷೇಮಾ ತಳಿಯ ಪ್ರಾತ್ಯಕ್ಷಿಕೆ | 25 |
| 4. | ನವಣೆಯ ಹೆಚ್.ಎಂ.ಟಿ.–100–1 ತಳಿಯ ಪ್ರಾತ್ಯಕ್ಷಿಕೆ | 25 |
| 5. | ಮಳೆಯಾಶ್ರಿತ ಸೂರ್ಯಕಾಂತಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ | 10 |
| 6. | ನೀರಾವರಿ ಸೂರ್ಯಕಾಂತಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ | 10 |
| 7. | ಸೋಯಾ ಅವರೆಯ ತಳಿ ಡಿ.ಎಸ್.ಬಿ–21 ರ ಪ್ರಾತ್ಯಕ್ಷಿಕೆ | 10 |
| 8. | ಯಾಂತ್ರೀಕರಣದೊಂದಿಗೆ ಶೇಂಗಾದ ಜಿಪಿಬಿಡಿ–5 ಮತ್ತು ಡಿ.ಹೆಚ್.–86 ರ ಪ್ರಾತ್ಯಕ್ಷಿಕೆ | 10 |
| 9. | ಔಡಲ ಬೆಳೆಯ ಉತ್ತಮಗೊಳಿಸಿದ ತಳಿಗಳ ಪರಿಚಯಿಸುವಿಕೆ | 10 |
| 10. | ತೊಗರಿಯಲ್ಲಿ ನಾಟಿ ಪದ್ಧತಿ | 05 |
| 11. | ಕಡಲೆಯ ಬಿ.ಜಿ.ಡಿ.–103 ತಳಿಯ ಪ್ರಾತ್ಯಕ್ಷಿಕೆ | 10 |
| 12. | ಕಬ್ಬಿನಲ್ಲಿ ಸಮಗ್ರ ಕಳೆ ನಿರ್ವಹಣೆ | 10 |
| 13. | ಕೂಳೆ ಕಬ್ಬಿನಲ್ಲಿ ಮಣ್ಣು ಫಲವತ್ತತೆ ಹಾಗೂ ತರಗು ನಿರ್ವಹಣೆ | 10 |
| 14. | ಬಿಟಿ ಹತ್ತಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ | 10 |
| 15. | ಬಾಳೆ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ | 10 |
| 16. | ಈರುಳ್ಳಿಯಲ್ಲಿ ನೇರಳೆ ಮಚ್ಚೆ ರೋಗದ ನಿರ್ವಹಣೆ | 10 |
| 17. | ಜಾನುವಾರುಗಳಲ್ಲಿ ಪರಕೀಯ ಜೀವಿಗಳ ಸೋಂಕಿನ ನಿರ್ವಹಣೆ | 20 |
| 18. | ಕಬ್ಬಿನಲ್ಲಿ ಒಂಟಿ ಕಣ್ಣು ಕತ್ತರಿಸುವ ಯಂತ್ರದ ಬಳಕೆ | 05 |
| 19. | ಒಣ ಭೂಮಿ ಮಣ್ಣು ಫಲವತ್ತತೆಯ ನಿರ್ವಹಣೆ | 05 |
| 20. | ಕಾರ್ಯ ನಿರ್ವಹಿಸುತ್ತಿರುವ ಗ್ರಾಮಗಳಲ್ಲಿ ಸಮಗ್ರ ಕೃಷಿ ಪದ್ಧತಿಯ ಮಾದರಿಗಳನ್ನು ಸ್ಥಾಪಿಸುವುದು. | 05 |

ಆಂತರಿಕ ಪ್ರಸಾರಕ್ಕಾಗಿ ಮಾತ್ರ

ಮುದ್ರಿತ ವಿಷಯ

ಗೆ,

______________________

______________________

______________________

ಪಿನ್ ಕೋಡ್ | | | | | | |

ಇಂದ:
**ಕಾರ್ಯಕ್ರಮ ಸಂಯೋಜಕರು**
ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ-581 135
ತಾ॥ ರಾಣೇಬೆನ್ನೂರು, ಜಿ॥ ಹಾವೇರಿ,
ದೂರವಾಣಿ:08373-253524, 9448495338
E-mail: kvk_haveri@rediffmail.com
Website :www.kvkhaveri.org
(ನಿಮ್ಮ ಅನಿಸಿಕೆಗಳನ್ನು ಈ ವಿಳಾಸಕ್ಕೆ ಕಳುಹಿಸಿ)

ಸಂಪಾದಕರು : **ಶ್ರೀಮತಿ ಗೀತಾ ಎಸ್. ತಾಮಗಾಳೆ**
ಪ್ರಕಾಶಕರು : **ಶ್ರೀ ಡಿ.ಎಸ್.ಎಂ. ಗೌಡ**
ಕಾರ್ಯಕ್ರಮ ಸಂಯೋಜಕರು
ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ

ಸಹ ಸಂಪಾದಕರು : ಡಾ. ಬಿ.ಎಂ. ಸೌಮ್ಯ, ಡಾ. ಎಸ್.ವೈ. ಮುಕರ್ತಾಳ
ಡಾ. ಕಾವೇರಾ ಬಿರಾದಾರ, ಡಾ. ಎಸ್.ಎ. ಅಷ್ಟಪುತ್ರೆ
ಡಾ. ಜಿ.ಆರ್. ರಾಜಕುಮಾರ ಶ್ರೀ ಮಲ್ಲಿಕಾರ್ಜುನ ಗದ್ದನಕೇರಿ
ಅಕ್ಷರ ಜೋಡಣೆ ಮತ್ತು ವಿನ್ಯಾಸ: ಕು. ರೇಖಾ ಕೆ.ಎನ್.
ಶ್ರೀಮತಿ ಸರೋಜ ತಳವಾರ